ಗೌತಮನ ಮುಖಾಮುಖಿಯಾಗಿತ್ತು. ತನ್ನ ಜೊತೆಯಲ್ಲಿ ಒಮ್ಮೆಯೂ ಹಾಸಿಗೆ ಸುಕ್ಕಾಗದ ರಾತ್ರಿಯನ್ನು ಕಳೆದವನಿಗೆ ಮೊದಲಿನಷ್ಟು ತನ್ನನ್ನು ಎದುರಿಸಿ ನಿಲ್ಲುವ ಚೈತನ್ಯವಿರಲಿಲ್ಲ. "ಕ್ಷಮಿಸಿ ಬಿಡು; ಬೇಕಿದ್ದರೆ ಬೇರೆ ಮದುವೆಯಾಗು" ಎಂದು ಸೋಲೊಪ್ಪಿದ ಶತ್ರುವಿನ ಹಾಗೆ ಕೈ ಮುಗಿದು ನಿಂತಿದ್ದ. ಕೆಂಡವಿದ್ದರೆ ಉರಿಯ ಜೊತೆಯಲ್ಲಿ ಸರಸವಾಡಬಹುದು, ತಣ್ಣಗೆ ಕೊರೆವ ಇದ್ದಿಲ ಜೊತೆಯಲ್ಲಿ ಗುದ್ದಾಡಿದರೆ ಮಸಿಯಲ್ಲದೆ ಮತ್ತೇನು ಸಿಗಲಿಕ್ಕೆ ಸಾಧ್ಯ ಎಂದು ಅನ್ನಿಸಿ ಸುಮ್ಮನಾಗಿದ್ದು, ಆಸ್ಪತ್ರೆಗಳ ಅಲೆಯತೊಡಗಿದ್ದು...

"ಸ್ವಲ್ಪ ಕಾಲು ಮಡಿಚಿ" ಧ್ವನಿ ಕೇಳಿ ಅರುಂಧತಿ ವಾಸ್ತವಕ್ಕೆ ಮರಳಿದಳು. ಹೆರಿಗೆ ರೂಮಿಗೆ ಶಿಫ್ಟ್ ಮಾಡುವುದಿಲ್ಲವಾ? ಎಂದು ಕೇಳಬೇಕು ಎಂದುಕೊಂಡಳಾದರೂ, ಎಲ್ಲಿಯಾದರೇನು ಬರಿದಾಗುವುದಕ್ಕೆ ಎಂದುಕೊಳ್ಳುತ್ತ ನಿರ್ಲಿಪ್ತವಾಗಿ ತನ್ನೆರಡು ಮಂಡಿಗಳನ್ನು ಮಡಿಚಿ ಮತ್ತೊಮ್ಮೆ ತನ್ನ ತೊಡೆಗಳ ನಡುವಿನ ಅಂತರವನ್ನು ಹೆಚ್ಚಿಸಿದಳು. "ಸಾಕು ದಟ್ಸ್ ಫೈನ್. ಈಗ ಅಭ್ಯಾಸವಾಗಿ ಹೋಯ್ತಲ್ಲ ನಿಮಗೆ" ಎನ್ನುತ್ತ ಡಾಕ್ಟರ್ ಮೋಹಕವಾಗಿ ನಕ್ಕರು. ಎಲ್ಲವೂ ಕೂಡ ಮಾಮೂಲಿ ಅನ್ನಿಸಿದ ಹಾಗೆ ಅದರ ಕುರಿತಾಗಿನ ಮುಜುಗರ, ಕುತೂಹಲ, ಆಸಕ್ತಿ ಎಲ್ಲವೂ ಕಳೆದುಹೋಗುತ್ತವೆ ಎಂದು ಅರುಂಧತಿಗೆ ಹೇಳಬೇಕೆನ್ನಿಸಿತು. ಹೇಳಲಿಲ್ಲ. "ಹೌದು" ಎಂದು ತಲೆಯಾಡಿಸಿ ಸುಮ್ಮನಾದಳು. ಅವಳ ಕಾಲ ಹೆಬ್ಬೆರಳ ತನಕ ಮುಚ್ಚಿದ್ದ ಗೌನನ್ನು ನರ್ಸ್ ನಿಧಾನವಾಗಿ ಮಂಡಿಯ ತನಕ ಎತ್ತಿ ಸರಿ ಮಾಡಿದಳು. ಹೊಳೆ ಹೊಳೆವ ಹಾಲುಬಿಳುಪಿನ ತನ್ನ ತೊಡೆಗಳನ್ನು ನೋಡಿ ಸ್ವತಃ ಅವಳಿಗೇ ಹೆಮ್ಮೆ ಅನ್ನಿಸಿತಾದರೂ ಯಾತಕ್ಕೂ ಉಪಯೋಗವಿಲ್ಲದ್ದು ಹೇಗಿದ್ದರೇನು ಅನ್ನಿಸಿ ತಾತ್ಸಾರವೂ ಮೂಡಿತು. ಅಲ್ಲದೇ ಬೆತ್ತಲಾಗಿದ್ದ ಸೊಂಟದ ಕೆಳಭಾಗಕ್ಕೂ ತನಗೂ ಈ ಕ್ಷಣಕ್ಕೆ ಸಂಬಂಧವೇ ಇಲ್ಲವೇನೋ ಅನ್ನಿಸಿ ಅದೀಗ ಏನಿದ್ದರೂ ಆ ಮನೆಯ ಅನ್ನದ ಋಣ ಸಂದಾಯಕ್ಕೆಂದು ಮೀಸಲಾದದ್ದು. "ನಿನ್ನಿಂದಲೇ ಈ ಮನೆ ಬೆಳಗಬೇಕು" ಎಂದು ಅತ್ತೆ ಗೋಗರೆಯುವುದಕ್ಕೊಂದು ಸಾಂತ್ವನ ಹೇಳುವ ಕ್ಷೇತ್ರವಷ್ಟೇ ಅನ್ನಿಸಿ ನಿರ್ಲಿಪ್ತ ತೆಳು ನಗುವೊಂದು ಜಾರಿ ಹೋಯಿತು.

"ಮೈ ಸ್ವಲ್ಪ ಸಡಿಲ ಬಿಡಿ" ವೈದ್ಯರ ಮಾತಿಗೆ ಆಕೆ ಏನೂ ಪ್ರತಿಕ್ರಿಯಿಸದೆ ಸುಮ್ಮನೆ ಇದ್ದಳು. "ಇನ್ನೆಂಥ ಮುಜುಗರ, ಇದು ನಾಲ್ಕನೇ ಸರ್ತಿ ಅಲ್ಲವಾ" ಎಂದರು. "ಹೆಣ್ತನದ ಪೊರೆಗಳ ಕಳಚಿದ ಮೇಲೆಯೇ ನಾನು ಇಲ್ಲಿಗೆ ಹೀಗೆ ಬರಲು ಅಣಿಯಾದದ್ದು" ಎಂದು ಹೇಳಬೇಕು ಅಂದುಕೊಂಡಳಾದರೂ ಅಷ್ಟರಲ್ಲಿ ಆಕೆಯ ಕೈಯಲ್ಲಿದ್ದ ದಪ್ಪ ನಳಿಕೆಯನ್ನು ನೋಡಿ ಉಸಿರು ಒಂದು ಕ್ಷಣ ಸ್ತಬ್ಧವಾಯಿತು. ತನ್ನ ಅಣು ಅಣುವಿನೊಳಗೆ ಸೇರಿಕೊಳ್ಳಲು ಹೊರಟ ಗೌತಮನ ಜೀವ ತಂತುಗಳು ನಿರ್ಜೀವ ಪ್ಲಾಸ್ಟಿಕ್ ಸಿರೆಂಜಿನ ಒಳಗಿರುವುದನ್ನು ನೋಡಿ ಹೊಟ್ಟೆಯಲ್ಲಿ ಒಮ್ಮೆ ಸಂಕಟವಾದಂತೆ ಅನ್ನಿಸಿ ಅದು ದೇಹದ ನರನಾಡಿಯನ್ನೆಲ್ಲ ವ್ಯಾಪಿಸಿ ಚುಚ್ಚಿ ನೋಯಿಸಿದಂತೆ ಭಾಸವಾಯಿತು. ಹಾಸಿದ್ದ ಹೂ ಮಂಚದ ಮೇಲೆ ನೂರಾರು ಕವಿತೆಗಳ ಎಣಿಸುತ್ತ ಕೂತು ಸ್ಪರ್ಶದ ಕನಸ ಕಾಣುತ್ತಿದ್ದವಳಿಗೆ, "ನೀನೆಂದರೆ ನನಗಿಷ್ಟವಿಲ್ಲ" ಎಂದ ಅವನ ಮಾತು ಬೇಡ ಬೇಡವೆಂದರೂ ನೆನಪಾಯಿತು. ತಾನೊಮ್ಮೆ ತನ್ನದೇ ಬೆಡ್‌ರೂಮಿನಲ್ಲಿ ನೋಡಿದ ಅವನ ಮತ್ತು ಅವನ ಆಫೀಸಿನ ಗೆಳೆಯನೊಬ್ಬನ ನೋಡಬಾರದ ದೃಶ್ಯಗಳು ಕಣ್ಣೆದುರಿಗೆ ಬಂದವು. ಮೈ ನರಗಳು ಯುದ್ಧದಲ್ಲಿ ಸೆರೆಯಾದ ಅಡಿಯಾಳುಗಳ ಹಾಗೆ ಬಿಳುಚಿಕೊಂಡವು. ತಣ್ಣಗೆ ಕೊರೆಯುತ್ತಿದ್ದ ಏಸಿಯಲ್ಲಿಯೂ ಆಕೆಯ ಉಸಿರ ಹೊಯ್ದಾಟ ಅತಿಯಾಯಿತು. "ಕೂಲ್ ಡೌನ್, ಏನೂ ನೋವಾಗಲ್ಲ ಅಂತ ನಿಮಗೆ ಗೊತ್ತಲ್ಲ" ಎನ್ನುವ